ದಿನಾಂಕ 02.04.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ವೈ.ಆರ್.ಕೆ ವಕೀಲರಿಂದಃ</u>

ನಾನು 5ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣ ಪತ್ರವದಲ್ಲಿ ಏನೆಲ್ಲಾ ಬರೆದಿದೆ ಗೊತ್ತಾ ಎಂದರೆ ಇಲ್ಲ. ಆದರೆ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೇ. ವಕೀಲರು ತಯಾರು ಮಾಡಿದ ದಾಖಲೆಗೆ ಸಹಿ ಮಾಡಿ ಎಂದು ಹೇಳಿದ ಕಾರಣ ಮಾಡಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೇನೆ ಎಂದು ಹೇಳುತ್ತಾರೆ. ನಮ್ಮ ಊರು ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್ ಪುರ ತಾಲೂಕಿನ ಜಕ್ಕನಕ್ಕಿ ಗ್ರಾಮ. ಅರ್ಜಿದಾರರ ಮನೆ ಮೊದಲು ಬೆಳ್ತಂಗಡಿ ತಾಲೂಕು ಕಲ್ಲಗುಡ್ಡೆಯಲ್ಲಿತ್ತು. ನಾನು ಎಸ್ಟೇಟ್ ನಲ್ಲಿ ಕೂಲಿ ಕೆಲಸ ಮಾಡುತ್ತೇನೆ. ಈಗ ದಿನಕ್ಕೆ ಸಂಬಳ ಎಷ್ಟು ಇದೆ ಎಂದರೆ ಸಾಕ್ಷಿ ರೂ.350 ಇದೆ ಎಂದು ಹೇಳುತ್ತಾರೆ. ಎಲ್ಲಾ ಕೆಲಸಕ್ಕೂ ಅದೇ ಸಂಬಳವಾ ಅಥವಾ ಬೇರೆ ಬೇರೆ ಸಂಬಳವಾ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಅರ್ಜಿದಾರರ ಮದುವೆ ಕುಟುಂಬದ ಹಿರಿಯರು ನೋಡಿ ಆದ ಮದುವೆಯಾಗಿರುತ್ತದೆ. ಸಾಕ್ಷಿ ಮುಂದುವರಿದು ಅರ್ಜಿದಾರರು ನನಗೆ ಬಲವಂತವಾಗಿ ಮದುವೆ ಮಾಡಿಕೊಟ್ಟಿದ್ದಾರೆ ಎಂದು ಅರ್ಜಿದಾರರು ಮದುವೆಯಾದ ನಂತರ ನನಗೆ ಹೇಳಿದ್ದಾರೆ ಎಂದು ಹೇಳುತ್ತಾರೆ. ಅರ್ಜಿದಾರರು ಪ್ರವೀಣ್ ಪೂಜಾರಿ ಎಂಬುವವರನ್ನು ಪ್ರೀತಿ ಮಾಡುತ್ತಿದ್ದರಂತೆ ಅವರನ್ನು ಬಿಡಿಸಿ ನನಗೆ ಮದುವೆ ಮಾಡಿಕೊಟ್ಟಿದ್ದಾರಂತೆ ಎಂದು ಹೇಳುತ್ತಾರೆ. ಈ ವಿಚಾರವನ್ನು ಮದುವೆ ಪೂರ್ವದಲ್ಲಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ, ಅವರೇ ಹೇಳಿರುತ್ತಾರೆ. ಮದುವೆಯಾಗುವ ಪೂರ್ವದಲ್ಲಿ ಯಾರೂ ಸಹ ನಮಗೆ ಆ ವಿಚಾರವನ್ನು ತಿಳಿಸಿರುವುದಿಲ್ಲ.

2. ಮದುವೆಯಾದ ನಂತರ ಮೊದಲ ಮಗು ದಿಃ 25.2.2015 ರಂದು ಜನಿಸಿರುತ್ತದೆ. ನನ್ನ ಮೊದಲ ಮಗವಿನ ಜನನ ಅರ್ಜಿದಾರರ ತಾಯಿಯ ಮನೆಯಲ್ಲಿ ಆಗಿದ್ದು, ಅರ್ಜಿದಾರರಿಗೆ 4 ತಿಂಗಳು ಇದ್ದಾಗಲೇ ಅವರ ತಾಯಿಯ ಮನೆಗೆ ಬಂದಿರುತ್ತಾರೆ. ಅರ್ಜಿದಾರರ ಸೀಮಂತ ಕಾರ್ಯ ಆಗಲಿಲ್ಲವಾ ಎಂದರೆ ಸಾಕ್ಷಿ ನಾವು ಕರೆದಿರುತ್ತೇವೆ, ಆದರೆ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ನಿಮ್ಮ ಮದುವೆ ಯಾವಾಗ ಎಲ್ಲಿ ಆಗಿದೆ ಎಂದರೆ ಸಾಕ್ಷಿ ದಿಃ 21.5.2014 ರಂದು ಗುರುವಾಯನಕೆರೆಯ

ಕುಲಾಲ್ ಮಂದಿರದಲ್ಲಿ ಆಗಿದೆ ಎಂದು ಹೇಳುತ್ತಾರೆ. ಮದುವೆಯಾದ ನಂತರ 2 ವಾರಗಳವರೆಗೆ ನೀವು ಮತ್ತು ಅರ್ಜಿದಾರರು ಚೆನ್ನಾಗಿದ್ದೆವು ಎಂದರೆ ಹೌದು. ಆನಂತರ ಪದೇ ಪದೇ ಕಿರಿಕಿರಿ ಕೊಡುತ್ತಿದ್ದರು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು ಅರ್ಜಿದಾರರಿಗೆ ಮನೆಯಿಂದ ದೂರವಾಣಿ ಕರೆ ಬಂದ ಕೂಡಲೇ ಅವರ ಮನೆಗೆ ಹೊರಟುಹೋಗುತ್ತಿದ್ದರು ಎಂದು ಹೇಳುತ್ತಾರೆ. ಅರ್ಜಿದಾರರು ನಿಮ್ಮ ಮತ್ತು ನಿಮ್ಮ ತಾಯಿಯ ಜೊತೆ ಗಲಾಟೆ ಮಾಡಿದ್ದಾರಾ ಎಂದರೆ ಇಲ್ಲ. ಹಾಗೆ ಮುಖ್ಯ ವಿಚಾರಣೆಯಲ್ಲಿ ಬರೆದಿದ್ದರೆ ಸರಿಯಲ್ಲ ಎಂದರೆ ಸಾಕ್ಷಿ ಸಣ್ಣ ಪುಟ್ಟ ಗಲಾಟೆಗಳನ್ನು ಮಾಡುತ್ತಿದ್ದರು ಎಂದು ಹೇಳುತ್ತಾರೆ. ಗಲಾಟೆಯಾದ ನಂತರ ದೂರು ದಾಖಲು ಮಾಡಿದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ದಿಃ 8.8.2015 ರಲ್ಲಿ ದೂರು ದಾಖಲು ಮಾಡಿದ ಬಗ್ಗೆ ದಾಖಲೆ ಇದೆ ಎಂದು ಹೇಳುತ್ತಾರೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಅದನ್ನು ವಕೀಲರಿಗೆ ನೀಡಿದ್ದೇವೆ ಎಂದು ಹೇಳುತ್ತಾರೆ. ಆ ರೀತಿ ದೂರು ನೀಡಿಲ್ಲ ಹಾಗೂ ಗಲಾಟೆಯಾಗದೇ ಇದ್ದರೂ ಜವಾಬ್ದಾರಿಯಿಂದ ತಪ್ಪಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಇಬ್ಬರು ಮಕ್ಕಳಲ್ಲಿ ಮೊದಲನೇಯವಳು 4ನೇ ತರಗತಿ ಆಕೆಯ ಹೆಸರು ಆರಾಧ್ಯ, ಎರಡನೇಯವಳು 1ನೇ ತರಗತಿ ಆಕೆಯ ಹೆಸರು ಆದ್ಯಾ ಎಂದು. ಎರಡನೇ ಮಗಳ ಹೆಸರು ಆರಾಧ್ಯ ಆಕೆ ದಿಃ 2.4.2018 ರಲ್ಲಿ ಹುಟ್ಟಿದ್ದಾರೆ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ದೊಡ್ಡ ಮಗಳ ಹೆಸರು ಆರಾಧ್ಯ ಎಂದು ಹೇಳುತ್ತಾರೆ. ನೀವು ಕೆಲಸಕ್ಕೆ ಎಲ್ಲಿ ಹೋಗುತ್ತೀರಿ ಎಂದರೆ ಸಾಕ್ಷಿ ಮನೆಯ ಹತ್ತಿರ ಇರುವ ತೋಟಕ್ಕೆ ಹೋಗುತ್ತೇನೆ ಎಂದು ಹೇಳುತ್ತಾರೆ. ಮನೆಗೆ ಸರಿಯಾಗಿ ಬರುತ್ತಿರಲಿಲ್ಲ, ಮಕ್ಕಳ ಊಟ, ಬಟ್ಟೆ, ತಿಂಡಿ, ತಿನಿಸುಗಳನ್ನು ಸರಿಯಾಗಿ ನೋಡುಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನೀವು ನೋಡಿಕೊಳ್ಳುತ್ತಿದ್ದಿರಿ ಎಂಬ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಯಾವ ತರಹದ ದಾಖಲೆ ಬೇಕು ಎಂದು ಹೇಳುತ್ತಾರೆ. ನಿಮ್ಮ ಹತ್ತಿರ ಯಾವುದೇ ದಾಖಲೆಗಳು ಇಲ್ಲದ ಕಾರಣ ನೀವು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕೆಲಸಕ್ಕೆ ಹೋಗಿ ವಾರಕ್ಕೆ ತಿಂಗಳಿಗೊಮ್ಮೆ ಬರುತ್ತಿದ್ದೆ ಎಂದರೆ ಸರಿಯಲ್ಲ.

4. ಅರ್ಜಿದಾರರು ಮನೆ ಬಿಟ್ಟು ಹೋಗಿದ್ದಾರೆ ಎಂದು ತಿಳಿಸಿದ್ದು ಈ ಬಗ್ಗೆ ನೀವೇನಾದರೂ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಅರ್ಜಿ ಸಲ್ಲಿಸುವ ಪೂರ್ವದಲ್ಲಿಯೇ ಅರ್ಜಿದಾರರು ಸಿ.ಡಿ.ಪಿ.ಒ ಕಚೇರಿಯಲ್ಲಿ ನೋಟೀಸ್ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಸಿ.ಡಿ.ಪಿ.ಒ ಕಚೇರಿಗೆ ಹೋದ ನಂತರವಾದರೂ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಅದು ನಮಗೆ

ಗೊತ್ತಾಗಿರುವುದಿಲ್ಲ ಎಂದು ಹೇಳುತ್ತಾರೆ. ನಿಮ್ಮ ವಕೀಲರ ಹತ್ತಿರ ಬೇರೆ ದಾರಿ ಇದೆಯಾ ಎಂದು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಹೇಳಿದ್ದಾರೆ ಎಂದು ಹೇಳುತ್ತಾರೆ. ನೀವು ಅರ್ಜಿ ಹಾಕಿಲ್ಲ ಮತ್ತು ಪ್ರಯತ್ನಪಟ್ಟಿಲ್ಲ ಎಂದರೆ ಸಾಕ್ಷಿ ನಾನು ಅರ್ಜಿ ಹಾಕಿರುವುದಿಲ್ಲ, ಅದು ನನಗೆ ಗೊತ್ತಾಗಿರುವುದಿಲ್ಲ ಎಂದು ಹೇಳುತ್ತಾರೆ. ತಪ್ಪು ನನ್ನದು ಇದ್ದ ಕಾರಣ ಹೆಂಡತಿ ಮಕ್ಕಳು ಬೇಕು ಎಂದು ಅರ್ಜಿ ಹಾಕಿಲ್ಲ ಎಂದರೆ ಸಾಕ್ಷಿ ಸಾಕಷ್ಟು ಬಾರಿ ಅರ್ಜಿದಾರರು ಬರುತ್ತಾರೆ ಎಂದು ಕಾದಿದ್ದೇನೆ ಎಂದು ಹೇಳುತ್ತಾರೆ.

5. ಒಂದು ತಿಂಗಳ ಕಾಲ ಮೊದಲನೇ ಮಗಳನ್ನು ಬಾಳೆಹೊನ್ನೂರು ಕನ್ನಡ ಮಾಧ್ಯಮ ಶಾಲೆಯಲ್ಲಿ ಸೇರಿಸಿದ್ದೆ. ಈ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಮಕ್ಕಳಿಗೆ ಸಮವಸ್ತ್ರ ಕೊಡಿಸಿದ ಬಗ್ಗೆ ರಶೀದಿ ಇದೆಯಾ ಎಂದರೆ ಸಾಕ್ಷಿ ಬಟ್ಟೆಗೆ ರಶೀದಿ ಹೇಗೆ ಕೊಡುತ್ತಾರೆ ಎಂದು ಹೇಳುತ್ತಾರೆ. ಬಟ್ಟೆ ಖರೀದಿ ಮಾಡಿದ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಇಲ್ಲ. ನೀವು ಒಟ್ಟಿಗೆ ಇದ್ದಾಗ ಯಾವ ಮಗಳಿಗೆ ಹುಷಾರಿರಲಿಲ್ಲ ಎಂದರೆ ಸಾಕ್ಷಿ ದೊಡ್ಡ ಮಗಳಾದ ಆರಾಧ್ಯ ರವರಿಗೆ ಹುಷಾರಿರಲಿಲ್ಲ ಎಂದು ಹೇಳುತ್ತಾರೆ. ಆಕೆಯನ್ನು ಆಸ್ಪತ್ರೆಗೆ ಸೇರಿಸಿದಾಗ ಅದರ ವೆಚ್ಚವನ್ನು ಅರ್ಜಿದಾರರು ಭರಿಸಿದ್ದಾರೆ ಎಂದರೆ ಇಲ್ಲ, ನಾನೇ ಭರಿಸಿದ್ದೇನೆ. ಅದರ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ವಕೀಲರಿಗೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

6. ಅರ್ಜಿದಾರರು ಏನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಹೋಮ್‌ನರ್ಸ್ ಕೆಲಸ ಮಾಡುತ್ತಾರೆ ಎಂದು ಹೇಳುತ್ತಾರೆ. ಆ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಇಲ್ಲ, ಆದರೆ ವಿಚಾರವನ್ನು ಅರ್ಜಿದಾರರೇ ಹೇಳಿದ್ದಾರೆ ಎಂದು ಹೇಳುತ್ತಾರೆ. ಬಿ.ಪಿ.ಎಲ್ ಕಾರ್ಡ್ ಹೋಲ್ಡರ್ ಎಂದು ತಿಳಿಸಿದ್ದು ಅದನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಹೆಂಡತಿ ಮತ್ತು ಮಕ್ಕಳಿಗೆ ಜೀವನಾಂಶ ಕೊಡಬೇಕಾಗುತ್ತದೆ ಎಂಬ ಕೆಟ್ಟ ಉದ್ದೇಶದಿಂದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, ದಾಖಲೆಗಳು ಇರುತ್ತವೆ. ಅರ್ಜಿದಾರರಿಗೆ ಮಧ್ಯಂತರ ಜೀವನಾಂಶ ಕೊಡಬೇಕೆಂದು ಆದೇಶವಾಗಿದ್ದು ಅದನ್ನು ತಂದಿದ್ದೀರಾ ಎಂದರೆ ಹೌದು. ಮಕ್ಕಳ ವಿದ್ಯಾಭ್ಯಾಸವನ್ನು ನೋಡುತ್ತೇವೆ ಎಂಬ ಕಾರಣ ನನ್ನ ಜೊತೆ ಮಕ್ಕಳನ್ನು ಬಿಡಲು ಅರ್ಜಿದಾರರು ತಯಾರಿದ್ದರು ಎಂದರೆ ಇಲ್ಲ, ಮನೆಯ ಹತ್ತಿರ ಹೋದರೆ ದೂರನ್ನು ಕೊಡುತ್ತೇನೆ ಎಂದು ಹೇಳುತ್ತಾರೆ ಎಂದು ಹೇಳುತ್ತಾರೆ.

7. ತಮ್ಮ ವಿಚಾರಣೆಯಲ್ಲಿ ಅರ್ಜಿದಾರರು ಅವರ ಮನೆಯವರು ಹೇಳಿದ ಹಾಗೆ ಕುಣಿಯುತ್ತಾರೆ ಎಂದು ತಿಳಿಸಿದ್ದು, ಅರ್ಜಿದಾರರ ಗಂಡ ದೀಪಕ್ ಎಂದು ಹೇಳಿದ್ದಿರಿ ಎಂದರೆ ಸಾಕ್ಷಿ

ಅರ್ಜಿದಾರರು ತನ್ನ ಫೇಸ್‌ಬುಕ್ ಖಾತೆಯಲ್ಲಿ ಆ ರೀತಿ ಹಾಕಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಅದರ ಪ್ರತಿ ಹಾಗೂ ಸಿ.ಡಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಅದು ಗೊತ್ತಾದ ನಂತರ ದೂರು ಕೊಟ್ಟಿದ್ದೀರಾ ಎಂದರೆ ಇಲ್ಲ. ನ್ಯಾಯಾಲಯದಲ್ಲಿ ಅರ್ಜಿ ಬಾಕಿ ಇದ್ದ ಕಾರಣ ನೀಡಿಲ್ಲ ಎಂದು ಹೇಳುತ್ತಾರೆ. ಆ ರೀತಿ ಯಾವುದೇ ಘಟನೆ ನಡೆಯದೇ ಕಾರಣ ದೂರು ಕೊಟ್ಟಿಲ್ಲ ಎಂದರೆ ಸಾಕ್ಷಿ ಸಿ.ಡಿ.ಪಿ.ಓ ಕಚೇರಿಯಿಂದ ನ್ಯಾಯಾಲಯಕ್ಕೆ ಬಂದ ಕಾರಣ ಆ ರೀತಿ ದೂರು ನೀಡಿಲ್ಲ ಎಂದು ಹೇಳುತ್ತಾರೆ. ಸಿ.ಡಿ.ಪಿ.ಓ ಕಚೇರಿಗೆ ಅರ್ಜಿದಾರರು ಅರ್ಜಿ ಕೊಟ್ಟಿದ್ದಾರೆ ಎಂದರೆ ಹೌದು, ನಾನು ಕೊಟ್ಟಿರುವುದಿಲ್ಲ. ಆ ಅರ್ಜಿ ಕೊಡುವ ಪೂರ್ವದಲ್ಲಿ ಅರ್ಜಿದಾರರ ಗಂಡ ದೀಪಕ್ ಎಂಬ ವಿಚಾರ ಗೊತ್ತಿದ್ದು, ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿದ್ದ ಕಾರಣ ನೀಡಿಲ್ಲ ಎಂದು ಹೇಳುತ್ತಾರೆ. ಅರ್ಜಿದಾರರು ಮತ್ತು ಮಕ್ಕಳನ್ನು ನೋಡಿಕೊಳ್ಳದೇ ಅರ್ಜಿದಾರರಿಗೆ ಹಲ್ಲೆ ಮಾಡಿ ಹಿಂಸೆ ನೀಡಿ ಮನೆಯಿಂದ ಹೊರಗೆ ಹಾಕಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅರ್ಜಿದಾರರ ದೊಡ್ಡಪ್ಪನ ಮಗನ ಮದುವೆಗಾಗಿ 2019 ರಲ್ಲಿ ಅವರೇ ಬಂದಿದ್ದಾರೆ, ನಾವು ಅವರನ್ನು ಮನೆಯಿಂದ ಹೊರಗೆ ಹಾಕಿಲ್ಲ ಎಂದು ಹೇಳುತ್ತಾರೆ.

8. ಫೇಸ್‌ಬುಕ್ ನಲ್ಲಿ ದೀಪಕ್, ಪ್ರೀತಿ ಇದ್ದದ್ದು ಪ್ರವೀಣ್ ಪೂಜಾರಿ ಜೊತೆ ಎಂದರೆ ಸಾಕ್ಷಿ ಪ್ರವೀಣ್ ಪೂಜಾರಿ ರವರ ಮೇಲೆ ಮದುವೆಯಾಗುವ ಪೂರ್ವದಲ್ಲಿ ಪ್ರೀತಿ ಇತ್ತು, ಬಲಾತ್ಕಾರದಿಂದ ನನಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂದು ಅರ್ಜಿದಾರರೇ ನನಗೆ ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ಅರ್ಜಿದಾರರು ತಮ್ಮ ಮತ್ತು ಮಕ್ಕಳ ಖರ್ಚಿಗೆ ಹಣ ಕೇಳಿದಾಗ ಅವರಿಗೆ ಹಿಂಸೆ ನೀಡಿ ಮನೆಯಿಂದ ಹಣ ತೆಗೆದುಕೊಂಡು ಬಾ ಎಂದು ಹಿಂಸೆ ನೀಡಿದ್ದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅರ್ಜಿದಾರರೇ ನನಗೆ ಬ್ಲಾಕ್ ಮೇಲ್ ಮಾಡಿ 10 ಸಾವಿರ ನೀಡಿ ಬಂಗಾರ ಬಿಡಿಸಿಕೊಡು ಎಂದು ಕೇಳಿರುತ್ತಾರೆ, ಬಿಡಿಸಿಕೊಟ್ಟಿರುತ್ತೇನೆ. ಅದು ಯಾರ ಬಂಗಾರ ಎಂದರೆ ಸಾಕ್ಷಿ ಚಿಕ್ಕಮಗುವಿನ ಬಂಗಾರ, ಅದನ್ನು ನಾನೇ ಕೊಡಿಸಿದ್ದೆ ಎಂದು ಹೇಳುತ್ತಾರೆ. ಚಿನ್ನವನ್ನು ನೀವೇ ತೆಗೆದುಕೊಟ್ಟ ಬಗ್ಗೆ ದಾಖಲೆ ಇದೆಯಾ ಎಂದರೆ ಹೌದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನಾನು ನಮ್ಮ ಊರಿನ ರಾಮೇ ಗೌಡರಿಂದ ಸಾಲವನ್ನು ಪಡೆದುಕೊಂಡು ಚಿನ್ನವನ್ನು ಬಿಡಿಸಿದ್ದೆ. ರಾಮೇಗೌಡರು ನಮ್ಮ ಊರಿನ ತೋಟದ ಮಾಲಿಕರು. ಯಾವುದೇ ದಾಖಲೆ ಮಾಡದೇ ಸಾಲವನ್ನು ನೀಡಿದ್ದಾರಾ ಎಂದರೆ ಸಾಕ್ಷಿ ದಾಖಲೆ ಇಲ್ಲ, ವಿಶ್ವಾಸದಲ್ಲಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ರಾಮೇಗೌಡರನ್ನು ಪ್ರಕರಣದಲ್ಲಿ ಸಾಕ್ಷಿ ಮಾಡಬಹುದಾ ಎಂದರೆ ಸಾಕ್ಷಿ ಅವರ ಆರೋಗ್ಯ ಸರಿ ಇಲ್ಲ

ಎಂದು ಹೇಳುತ್ತಾರೆ. ಅವರಿಗೆ ವಯಸ್ಸು ಸುಮಾರು 75 ವರ್ಷ ಮೇಲಾಗಿದೆ. ಅವರ ಆಧಾರ್ ಕಾರ್ಡನ್ನು ಹಾಜರುಪಡಿಸಬಹುದಾ ಎಂದರೆ ಇಲ್ಲ. ಕಟ್ಟುಕತೆಗಳನ್ನು ಕಟ್ಟಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗಿ ನೋಡಿಕೊಳ್ಳಲು ತಯಾರಿದ್ದೇನೆ ಎಂದು ತಿಳಿಸಿದ್ದೀರಾ ಎಂದರೆ ಹೌದು, ಬಂದರೆ ಕರೆದುಕೊಂಡು ಹೋಗುತ್ತೇನೆ. ನಿಮಗೆ ದಿನಕ್ಕೆ ಖರ್ಚಿಗೆ ಎಷ್ಟು ಬೇಕು ಎಂದರೆ ಸಾಕ್ಷಿ ರೂ. 150 ಬೇಕು ಎಂದು ಹೇಳುತ್ತಾರೆ. ಉಳಿಕೆ ಹಣವನ್ನು ಹೆಂಡತಿ ಮಕ್ಕಳನ್ನು ಸಾಕುತ್ತೀರಾ ಎಂದರೇ ಸಾಕ್ಷಿ ನನಗೆ ಬಿ.ಪಿ.ಎಲ್ ಕಾರ್ಡ್ ಇದೆ, ರೇಶನ್ ಬರುತ್ತದೆ ಎಂದು ಹೇಳುತ್ತಾರೆ. ಬಿ.ಪಿ.ಎಲ್ ಕಾರ್ಡ್ ಇದ್ದ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿ ಗೊತ್ತಾಗಿರುವುದಿಲ್ಲ, ಹಾಜರುಪಡಿಸುತ್ತೇನೆ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)